ಅಷ್ಟರಲ್ಲಿಯೇ ನಾಯಕ್‌ನ ತಂಡದ ಪೈಕಿ ಒಬ್ಬ ಯುವಕ ಕೇಳಿದ, "ನಿನ್ನ ಗಂಡನ ನಂಬರನ್ನು ಕೊಡಮ್ಮ. ಅವನಿಗೆ ಫೋನ್ ಮಾಡಿ ಕರಿಸ್ತೀವಿ". ಅವಳಿಗೆ ಇನ್ನಷ್ಟು ದುಃಖವಾಯಿತು; ಬಿಕ್ಕುತ್ತಾ ಬಿಕ್ಕುತ್ತಾ ಹೇಳಿದಳು: ''ಅವರ ಫೋನ್ ಸ್ವಿಚ್ ಆಫ್ ಆಗಿ ಎಂಟು ತಿಂಗಳ ಮೇಲೆ ಆಯ್ತಣ್ಣ.'' ಅನಂತರ ಇನಾಯತ್‌ನೊಡನೆ ತನ್ನ ಮದುವೆಯಾದದ್ದು, ಮಸೀದಿಯ ತೀರ್ಮಾನಗಳು ಎಲ್ಲವನ್ನೂ ತಾಯಿ ಮಗಳಿಬ್ಬರು ಬಿಚ್ಚಿಟ್ಟರು. ನಾಯಕ್ ಖಲಂದರ್‌ನನ್ನೇ ದುರುಗುಟ್ಟಿ ನೋಡಿದ. ರಘುವಿನ ಕ್ಯಾತೆ ಮುಂದುವರೆಯುತ್ತಲೇ ಇತ್ತು.

"ಅಲ್ಲ ಚಿಗಪ್ಪ, ಮಾನಮರ್ಯಾದೆ ಇದೆಯಾ ಇಲ್ವಾ ನಿಂಗೆ? ನಿಮ್ಮ ಏರಿಯಾ ಮಸೀದಿ ಅಲ್ವಾ ಇದು?" ಎಂದು ಪ್ರಶ್ನೆ ಮಾಡಿದ. ಖಲಂದರ್‌ನ ಕತ್ತು ಬಾಗಿತ್ತು. ಧ್ವನಿ ಅಡಗಿತ್ತು. ಇದ್ಯಾವ ಗ್ರಹಚಾರ! ಅಲ್ಲಿ ಅಮೆರಿಕದಲ್ಲಿ ಒಂದು ಬಾಂಬ್ ಬಿದ್ದರೆ ತಾನು ಇಲ್ಲಿ ಉತ್ತರಿಸಬೇಕು. ಅಫ್ಘಾನಿಸ್ಥಾನದಲ್ಲಿ ತಾನು ಕಂಡು ಕೇಳರಿಯದವ ಬಂದೂಕು ಹಿಡಿದರೆ ತಾನು ಉತ್ತರಿಸಬೇಕು; ಬೈಡನ್ ಮನೆಯ ಅಡುಗೆಮನೆಯಲ್ಲಿ ಒಂದು ಜಿರಲೆ ಮೀಸೆ ತಿರುವಿದರೆ ತಾನು ಸಾರಿ ಕೇಳಬೇಕು. ಹಿಂದೂಗಳಲ್ಲಿ ಯಾರು ಕೂಡಾ ಹೆಂಡತಿ ಮತ್ತು ಮಕ್ಕಳನ್ನು ಬೀದಿ ಪಾಲು ಮಾಡುವುದೇ ಇಲ್ಲವೇ? ಆಗ ನಾನು ಈ ನನ್ ಮಗನ್ನ ಈ ರೀತೀಲಿ ಕೇಳಿದರೆ ಇವನು ಸುಮ್ನಿರ್ತಾನ?

"ಹೌದು ಇವಳ ಪರ ನ್ಯಾಯ ಕೇಳೋದಿಕ್ಕೆ ಹೋಗಿ ಇನಾಯತ್‌ನ ಅಪ್ಪ ಹಲ್ಕಾ ಸೂಳೇಮಗ ಹೋಲಿಕೆ ಮಾಡಿ ಮಾತಾಡಿದ್ದಕ್ಕೆ ಅವನಿಗೆ ನಾಕು ಬಿಟ್ಟು ಆರು ತಿಂಗಳ ಕಾಲ ಪೊಲೀಸ್ ಸ್ಟೇಷನ್ ಅಲಿದಿದೀನಪ್ಪ ನಾನು. ನಿನ್ನಂಗೆ ನಂಗೂ ಹೊಟ್ಟೆ ಉರಿಯುತ್ತೆ."

ನಾಯಕ್‌ಗೆ ಕೂಡ ಏನು ಮಾಡಲೂ ತೋಚಲಿಲ್ಲ. "ಆಯ್ತು ಈಗ ನೀವು ಎಲ್ಲಿ ಹೋಗ್ತೀರಿ ಅಲ್ಲಿಗೆ ತಲುಪಿಸುತ್ತೇವೆ." ಎಂದು ಅವನು ಆ ತಾಯಿಗೆ ಕೇಳಿದ. ಅಷ್ಟು ಹೊತ್ತಿಗೆ ಸಹನೆಯನ್ನು ಕಳೆದು ಕೊಂಡಿದ್ದ ರಘು ಬಸ್‌ನ ಮೆಟ್ಟಿಲಿನ ಮೇಲೆ ಬಂದು ನಿಂತು ನಾಯಕ್‌ನನ್ನೇ ಕುರಿತು ಅವಾಚ್ಯವಾಗಿ ನಿಂದಿಸತೊಡಗಿದ. ನಾಯಕ್ ಒಮ್ಮೆ ಹಿಂದಿರುಗಿ ನೋಡಿದನಷ್ಟೇ... ಅವನ ಹಿಂಬಾಲಕರು ರಘುವನ್ನು ಅನಾಮತ್ತಾಗಿ ಕೆಳಗೆ ಎಳೆದುಕೊಂಡರು. ತನ್ನ ಬ್ಯಾಗಿನಲ್ಲಿದ್ದ ಬಾಟಲಿಯಿಂದ ಬಾಯಿಗೆ ನೀರು ಹೊಯ್ದುಕೊಂಡ ನಾಯಕ್, ಅದನ್ನು ಕುಡಿಯದೆ ಪಕ್ಕಕ್ಕೆ ಸರಿದು ಉಗಿದ. ಅಲುಗಾಡದಂತೆ ತನ್ನ ಸ್ನೇಹಿತರ ಹಿಡಿತದಲ್ಲಿ ಸೆರೆಯಾಗಿದ್ದ ರಘುವಿನ ಕೈಗೆ ಬಾಟಲಿಯನ್ನು ನೀಡಿ, ''ಯಾವಾಗ ಏನು ಕುಡೀಬೇಕು... ಯಾವಾಗ ಏನು ಹೇಳಬೇಕು ಅನ್ನೋದು ಮನ್ಸನಿಗೆ ಗೊತ್ತಿರಬೇಕು ಕಣ್ಲಾ... ಹೆಂಡ್ತಿ ಯಾರು ಅವ್ವ ಯಾರು ಅನ್ನೋ ಗ್ಯಾನ ಇರ್ಬೇಕು... ಅದು ಧರ್ಮ. ಅದು ಬಿಟ್ಟು ಹಿಂಗೆ ಕರಡಿ ಕುಣಿತ ಕುಣಿದ್ರೆ ನಾವು ಯಾವೊತ್ತು ರಸ್ತೆ ಹೆಣ ಆಗ್ತೀವಿ ಗೊತ್ತಿಲ್ಲ, ತಿಳ್ಕ'' ಎಂದ. ಅವನ ಸ್ನೇಹಿತರ ಹಿಡಿತ ಬಲವಾಗಿಯೇ ಇತ್ತು.

"ನಾವು ಹೊಳೆನರಸೀಪುರಕ್ಕೆ ಹೋಗೋದಿಲ್ಲ ಕಣಪ್ಪ. ನಾವು ಹಾಸನದಲ್ಲಿ ಇರೋ ಮಸೀದಿಗೆ ಹೋಗ್ತೀವಿ. ಅಲ್ಲೇ ಮಗುನ ಮಣ್ಣು ಮಾಡ್ತಾರೆ. ಅಲ್ಲೇ ಅದರಪ್ಪ ಬರ್ತಾನ ನೋಡ್ತೀವಿ. ನಾವಂತೂ ಹೊಳೆನರಸಿಪುರಕ್ಕೆ ತಗೊಂಡು ಹೋಗಿ ಮಣ್ಣು ಮಾಡ್ತೀವಿ. ಆದರೆ, ಖಯಾಮತ್‌ನ ದಿನ ಅಪ್ಪ ಮಗು ಒಬ್ಬರನ್ನೊಬ್ಬರು ನೋಡಕ್ಕೆ ನಾವು ಅವಕಾಶ ಕೊಡಲಿಲ್ಲ ಅಂತ ನಮ್ಮ ಮೇಲೆ ಧರ್ಮ–ಕರ್ಮ ಬರೋದು ಬೇಡ. ಹೊಳೆನರಸೀಪುರಕ್ಕೆ ಆದರೆ ಅವನು ಬರೋದೇ ಇಲ್ಲ. ಹಾಸನದ ಮಸೀದಿಗೆ ತಗೊಂಡು ಹೋಗ್ತೀವಿ." ಅಂತ ಹೇಳಿ ಆಕೆ ಉಸ್ಸೆಂದು ನಿತ್ರಾಣವಾಗಿ ಕುಸಿದಳು.

'ಈಗ ಇದೇನೂ ಮಾಡೋಕೆ ಆಗೋದಿಲ್ಲ' ಎಂದು ನಾಯಕ್ ಆಲೋಚನೆ ಮಾಡುತ್ತಿದ್ದಂತೆಯೇ ಆಟೋರಿಕ್ಷಾವೊಂದು ಅಲ್ಲಿ ಹೋಗುತ್ತಿದ್ದುದನ್ನು ಗಮನಿಸಿದ. ನಾಯಕ್‌ನ ಆಜ್ಞೆಯ ಅನುಸಾರ ಅವನ ಇಡೀ ತಂಡ ಆಟೋರಿಕ್ಷಾವನ್ನು ಸುತ್ತುವರೆದು ಅದರಲ್ಲಿದ್ದ ಪ್ರಯಾಣಿಕರನ್ನು ಕೆಳಗಿಳಿಸಿದರು. ಅವರು